**<u>1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>**

**<u>ಸಿ.ಸಿ. ಸಂಖ್ಯೆಃ 1078/2025</u>**

<u>ಪಿರ್ಯಾದಿ</u> : ರಾಜ್ಯ, ಪರವಾಗಿ ಬಣಕಲ್ ಪೊಲೀಸ್ ಠಾಣೆ,
ಮೂಡಿಗೆರೆ ತಾಲ್ಲೂಕು.

ವಿರುದ್ಧ

<u>ಆರೋಪಿತರು</u> : **1.** ಮೈತ್ರಿ.ಎ.ಎಲ್, ವಯಸ್ಸು 68 ವರ್ಷ,
ಕೊಂ ದಿಃ ಚಿದಂಬರ ಹೆಚ್.ಕೆ.

**2.** ಪ್ರತೀಕ್.ಹೆಚ್.ಸಿ, ವಯಸ್ಸು 38 ವರ್ಷ,
ಬಿನ್ ದಿಃ ಚಿದಂಬರ.ಹೆಚ್.ಕೆ.

**3.** ಗಣಪತಿ ಯಾನೆ ಗಣೇಶ .ಹೆಚ್.ಪಿ, ವಯಸ್ಸು 65 ವರ್ಷ,
ಬಿನ್ ದಿಃ ಹೆಚ್.ಕೆ. ಪುಟ್ಟೇಗೌಡ.

**4.** ರವಿ.ಹೆಚ್.ಪಿ, ವಯಸ್ಸು 61 ವರ್ಷ,
ಬಿನ್ ದಿಃ ಹೆಚ್.ಕೆ. ಪುಟ್ಟೇಗೌಡ.

ಎಲ್ಲರೂ ವಾಸಃ ಹಳೇಹಳ್ಳಿ ಗ್ರಾಮ,
ಬಿ ಹೊಸಹಳ್ಳಿ ಅಂಚೆ, ಬಣಕಲ್ ಹೋಬಳಿ,
ಮೂಡಿಗೆರೆ ತಾಲ್ಲೂಕು.

<u>ದೋಷಾರೋಪಣೆ</u>

ಶ್ರೀಮತಿ ಸುರಕ್ಷ ಕೆ.ಕೆ., 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆಗಳು ಏನೆಂದರೆಃ-

ಬಣಕಲ್ ಪೋಲೀಸ್ ಠಾಣಾ ವ್ಯಾಪ್ತಿಯ ಚಾಸಾ-1 ರೇಖಾ ಜಿ.ಎಂ. ರವರ ಹಿರಿಯ ಮಗಳಾದ ಚಾಸಾ-2 ಯಶಶ್ವಿನಿ ಕೆ.ಸಿ. ರವರನ್ನು ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕು ಬಣಕಲ್ ಹೋಬಳಿ, ಬಿ ಹೊಸಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳೇಹಳ್ಳಿ ಅಸೆಸ್ ಮೆಂಟ್ ನಂ.133 ರಲ್ಲಿ ವಾಸದ ಮನೆ ಮಾಲಿಕರಾದ 1 ನೇ ಆರೋಪಿಯಾದ ನಿಮ್ಮ ಮಗನಾದ 2 ನೇ ಆರೋಪಿಯಾದ ನಿಮ್ಮ ಜೊತೆ ಮದುವೆ ಮಾಡಿಕೊಟ್ಟಿದ್ದು, ಇಬ್ಬರಿಗೂ ಕ್ರಥವ್ ಎಂಬ ಚಿಕ್ಕ ಮಗನಿದ್ದು, ಚಾಸಾ-2 ಮತ್ತು 2 ನೇ ಆರೋಪಿಯಾದ ನೀವು ಇಬ್ಬರೂ ಮದುವೆ ಆಗಿ ಸುಮಾರು 1 ವರ್ಷದ ನಂತರ ಇಬ್ಬರ ನಡುವೆ ಬಿನ್ನಾಭಿಪ್ರಾಯವಾಗಿ, ಹೊಂದಾಣಿಕೆ ಆಗದೇ, ಆಗಾಗ್ಗೆ ಗಲಾಟೆ ಮಾಡಿಕೊಳ್ಳುತ್ತಿದ್ದು, ಚಾಸಾ-2 ರವರು ಬಣಕಲ್ ಠಾಣೆಗೆ ನೀಡಿದ ದೂರಿನ ಮೇರೆಗೆ ಕೇಸು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದು, 2 ನೇ ಆರೋಪಿಯಾದ ನೀವು ಚಿಕ್ಕಮಗಳೂರಿನ ಕೌಟುಂಬಿಕ ನ್ಯಾಯಾಲಯದಲ್ಲಿ ಚಾಸಾ-2 ಮತ್ತು ಮಗ

ಬೇಕೆಂದು ಸಲ್ಲಿಸಿದ ಮನವಿ ವಿಚಾರಣೆಯಲ್ಲಿದ್ದು, ಹೀಗಿರುವಾಗ, ದಿನಾಂಕಃ 05.07.2024 ರಂದು ಚಾಸಾ-1 ಮತ್ತು 3 ರವರಿಬ್ಬರೂ ಚಾಸಾ-2 ಹಾಗೂ ಅವರ ಮಗ ಕ್ರಥವ್ ನನ್ನು 2 ನೇ ಆರೋಪಿಯಾದ ನಿಮ್ಮ ಮನೆಗೆ ಬಿಟ್ಟು ಬರಲೆಂದು ಕಟ್ರುಮನೆಯಿಂದ ವಾಹನ ನೋಂದಣಿ ಸಂಖ್ಯೆ ಕೆಎ-18-ಎಂ-7493 ರ ಮಾರುತಿ ಸುಜುಕಿ ಆಲ್ಟೋ ಕಾರ್ ನಲ್ಲಿ ಹೊರಟು ಮದ್ಯಾಹ್ನ 2.45 ರ ಸಮಯದಲ್ಲಿ ಕಾರ್ ನಿಲ್ಲಿಸಿ, 2 ನೇ ಆರೋಪಿಯಾದ ನಿಮ್ಮ ಮನೆಯ ಬಾಗಿಲಿನ ಬಳಿ ಹೋಗಿ ಒಳಗೆ ಹೋಗುವಾಗ, ಮನೆ ಒಳಗೆ ಇದ್ದ 1 ನೇ ಆರೋಪಿಯಾದ ನೀವು ಚಾಸಾ-1 ರಿಂದ 3 ರವರಿಗೆ ಒಳಗೆ ಬಾರದಂತೆ ತಡೆದು ಅಡ್ಡಗಟ್ಟಿರುತ್ತೀರಿ. ಈ ರೀತಿ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **126(2)** ಸಹ ಕಲಂ **3(5)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**2**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು, ನಿಮ್ಮ ಪೈಕಿ 1 ನೇ ಆರೋಪಿಯಾದ ನೀವು ಚಾಸಾ-1 ರಿಂದ 3 ರವರನ್ನು ಅಡ್ಡಗಟ್ಟಿ, ಬೇವರ್ಸಿಗಳ ನಮ್ಮ ಮನೆಗೆ ಏಕೆ ಬಂದಿದ್ದೀರಾ ಎಂದು, ಅಕ್ಕ-ಪಕ್ಕದ ಮನೆಯ ವಾಸಿಗಳಾದ 3 ಮತ್ತು 4 ನೇ ಆರೋಪಿತರಾದ ನೀವುಗಳು 1 ನೇ ಆರೋಪಿಯಾದ ನಿಮ್ಮ ಮನೆಯೊಳಗೆ ಹೋಗಿ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿದ್ದಲ್ಲದೇ, 4 ನೇ ಆರೋಪಿಯಾದ ನೀವು ಚಾಸಾ-1 ರಿಂದ 3 ರವರುಗಳಿಗೆ ಆವಾಚ್ಯ ಶಬ್ದಗಳಿಂದ ಬೈದಿರುತ್ತೀರಿ.ಈ ರೀತಿ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **352** ಸಹ ಕಲಂ **3(5)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

**3**. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು, ನಿಮ್ಮ ಪೈಕಿ 1 ನೇ ಆರೋಪಿಯಾದ ನೀವು ಚಾಸಾ-1 ರಿಂದ 3 ರವರಿಗೆ ಬೈದು, ಉಗಿದು ಗಲಾಟೆ ಮಾಡಿ, ಮೈಕೈಗೆ ಹೊಡೆದು ನೋವುಂಟು ಮಾಡಿರುತ್ತೀರಿ. ಈ ರೀತಿ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **115(2)** ಸಹ ಕಲಂ **3(5)** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ**?** ಅವುಗಳು ನಿಮಗೆ ಅರ್ಥವಾಯಿತೇ**?**
ಆರೋಪಿತರ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ**?**
ಆರೋಪಿತರ ಉತ್ತರಃ

**(**ಆರೋಪಿತರಿಗೆ ದಿನಾಂಕ 02.04.2026 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ**,** ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು**.** ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ**)**

**Sd/-**

ಮೂಡಿಗೆರೆ
ದಿನಾಂಕಃ 02.04.2026

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ**.**ಎಂ**.**ಎಫ್**.**ಸಿ**,** ಮೂಡಿಗೆರೆ**.**